4) ವಿಷಯ: ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಸಂಡಾ ವಿದ್ಯುತ್ ಗ್ರಿಡ್ ಕಾಮಗಾರಿಯು ವಿಳಂಬವಾಗಿರುವ ಬಗ್ಗೆ.

ಶ್ರೀ ಎಸ್. ಮಧು ಬಂಗಾರಪ್ಪ (ಸೊರಬ):– ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಸಂಡಾ ವಿದ್ಯುತ್ ಗ್ರಿಡ್ ಕಾಮಗಾರಿಯು 2014 ರಲ್ಲಿಯೇ ಪೂರ್ಣವಾಗಬೇಕಾಗಿತ್ತು. ಈಗಾಗಲೇ ಒಂದು ವರ್ಷವಾಗಿದೆ. ಆ ಕಡೆ ಭಾಗದಲ್ಲಿ ಬಹಳ power problem ಇರುವುದರಿಂದ ಅದನ್ನು ಈ ಕಡೆ ಭಾಗದಲ್ಲಿ ಸೊರಬ ಕ್ಷೇತ್ರದಲ್ಲಿ ಎಲ್ಲ wiring ಮಾಡಿಯಾಗಿದೆ. 2014 ರಲ್ಲಿಯೇ ಆಗಿದ್ದರೂ ಒಂದು ವರ್ಷದಿಂದ ಇನ್ನೂ ಟೆಸ್ಟ್, ಟೆಸ್ಟ್ ಎಂದೇ ಮಾಡುತ್ತಿದ್ದಾರೆ. ಅದನ್ನು ದಯವಿಟ್ಟು ಆದಷ್ಟು ಶೀಘ್ರವಾಗಿ ಕಾರ್ಯರೂಪಕ್ಕೆ ಬರುವಂತೆ ಮಾಡಲು ಕನೆಕ್ಷನ್ ಕೊಡಬೇಕು, ಚಾರ್ಜ್ ಕೊಡಬೇಕೆಂದು ಮಾನ್ಯ ಇಂಧನ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು) (ಇಂಧನ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನಲ್ಲಿ ಸಂಡಾ ಕೈಗಾರಿಕಾ ಪ್ರದೇಶದಲ್ಲಿ 2x10 ಎಂ.ವಿ.ಎ. 110/11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ನಿರ್ಮಿಸುತ್ತಿದೆ.

ಸದರಿ ವಿದ್ಯುತ್ ಉಪ ಕೇಂದ್ರದ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಕಾಮಗಾರಿಯನ್ನು ಮಾರ್ಚ್–2015ರೊಳಗೆ ಪೂರ್ಣಗೊಳಿಸಿ ಚಾಲನೆಗೊಳಿಸಲು ಉದ್ದೇಶಿಸಿದೆ.